IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 6, 2022

# "ವಚನ ಸಾಹಿತ್ಯದಲ್ಲಿ ಕಾಯಕ ಸಂಸ್ಕೃತಿ"

**ಡಾ, ಭೀಮಣ್ಣ ಎಚ್**
**ಸಹಪಾಧ್ಯಾಪಕರು**
**ಸರಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂ**

ಕನ್ನಡ ನಾಡಿನಲ್ಲಿ ಕಾಯಕ ಸಂಸ್ಕೃತಿಯ ಮಹತ್ವ ತಿಳಿಸಿಕೊಟ್ಟವರು ಕಾಯಕದಿಂದ ಬದುಕು ನಡೆಸಿದ ಮಹಾನ್ ಪುರುಷರೆಂದರೆ ಬಸವಾದಿ ಶರಣರು. ಜೀವನದಲ್ಲಿ ಮಾಡುವ ಕಾಯಕ ಜೀವನಕ್ಕೆ ದಾರಿದೀಪ ತೋರಿಸುವಂಥದ್ದು. ಮಾಡುವ ಕಾಯಕದಲ್ಲಿ ಶ್ರೇಷ್ಠ, ಕನಿಷ್ಠ ಎಂದು ಕೀಳರಿಮೆ ಹೊಂದಿರಬಾರದು ನಾವು ಮಾಡುವ ಕೆಲಸ ಯಾವುದೇ ಇದ್ದರೂ ಅದು ಶ್ರೇಷ್ಠ. ಕಾಯಕದಲ್ಲಿ ನಿಷ್ಠೆ ಹೊಂದಿದ ಶರಣರು ಕೈಲಾಸವನ್ನು ಕಾಣಬಹುದು ಎಂದು ಶರಣರು ಹೇಳಿದ್ದಾರೆ. ಸಮಾಜ ಸುಧಾರಣೆಯಾಗಬೇಕಾದರೆ ಮೊದಲು ಕೆಲಸದಲ್ಲಿ ನಿರತರಾಗಬೇಕು ಮಾಡುವ ಕಾಯಕ ಒಳ್ಳೆಯ ಮಾರ್ಗ ಬಂದಿರಬೇಕು, ಕಾಯಕದಲ್ಲಿ ತನ್ನನ್ನು ತಾನು ಮರೆತುಕೊಳ್ಳುವಂತೆ ಇರಬೇಕು ಎಂದು ಹನ್ನೆರಡನೇ ಶತಮಾನದ ವಚನಕಾರರು ಸಾರಿ ಸಾರಿ ಹೇಳಿದ್ದಾರೆ. ಆಯ್ದಕ್ಕಿ ಲಕ್ಕಮ್ಮ ಎಂಬ ವಚನಕಾರತಿ ಹೀಗೆ ಹೇಳುತ್ತಾರೆ.

**" ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ**
**ಭಾವ ಶುದ್ಧವಾಗಿ ಮಹಾಶರಣರ ತಿಪ್ಪೆಯ ಕಪ್ಪಲ ಅಕ್ಕಿಯ ತಂದು**
**ನಿಶ್ಚಸಿ ಮಾಡಬೇಕು ಮಾರಾಯ ಪ್ರಿಯ ಅಮರೇಶ್ವರ ಲಿಂಗಕ್ಕೆ**
**ಬೇಗ ಹೋಗು ಮಾರಯ್ಯ"**

12ನೇ ಶತಮಾನದ ಇದಕ್ಕಿ ಲಕ್ಕಮ್ಮ ತನ್ನ ಗಂಡನಿಗೆ ಕಾಯಕದ ಬಗ್ಗೆ ನೆನಪಿಸುವ ಪರಿ ಇದು. ಕಾಯಕದಲ್ಲಿ ನಿರತನಾದ ಶರಣ ತನ್ನನ್ನು ತಾನು ಮರೆತು ಶುದ್ಧ ಚಿತ್ತದಿಂದ ಕಾಯಕ ಮಾಡಬೇಕು ಎಂದು ಹೇಳುವ ಬಗೆಯಾಗಿದೆ. ಲಕ್ಕಮ್ಮ ಗಂಡನಿಗೆ ಕಾಯಕ ನಿಲ್ಲಿಸಬಾರದು ಭಾವ ಶುದ್ಧ ದಿಂದ ಮಹಾಶರಣರ ತಿಪ್ಪೆಯ ತಪ್ಪಲ್ಲ ಅಕ್ಕಿಯ ಆರಿಸಿ ತಂದು ಪರಿಶುದ್ಧ ಮನಸ್ಸಿನಿಂದ, ಅಚಲವಾದ ಭಕ್ತಿಯಿಂದ ಕಾಯಕ ನೆರವೇರಿಸಿ ಇಲ್ಲದೆ ಹೋದರೆ ಅಮರೇಶ್ವರ ಲಿಂಗವು ಮೆತ್ತಲಾರದು ಎಂದು ಹೇಳುವಲ್ಲಿ ಕಾಯಕ ನಿಷ್ಠೆ ತಿಳಿದು ಬರುತ್ತದೆ. ಮಹಾ ಶರಣೆ ತನ್ನ ಕಾಯಕ ನಿಷ್ಠೆ, ಭಕ್ತಿ, ಪರಿಶ್ರಮ, ಶ್ರದ್ಧೆ ಹೆಣ್ಣು ಗಂಡು ಎಂಬ ಭಾವ ಅಳಿದು ಹಾಕುವ ಬಗೆ ತಿಳಿದು ಬರುತ್ತದೆ.

 © 2012 IJFANS. All Rights Reserved, 

" ಕಾಯವಿಡಿದಿಹನ್ನಬರ ಶಿವ ಭತ್ತಂಗೆ
ಕಾಯಕವೆ ಕೈಲಾಸ
ಕಾಯಕವಿಲ್ಲದವನ ಅರಿವು ವಾಯವಾಯಿತ್ತು
ಅಡಗೂಳಿಯ ಮನೆಯಂತೆ
ಗಡಿಗೆಯ ಗಂಜಿಯಾಸ ಬೇಡ
ಕೊಡುವರೆಂದೊಬ್ಬರ ಮನೆಗೆ
ಗಡಿಗಡಿಗೆ ಹೋಗಬೇಡ
ಇಂತಿವರಡಿಯ ಕಾಬುದಕ್ಕೆ ಮೊದಲೆ
ಅಡಗಿದೆಯಲ್ಲಾ
ಮನಸಂದಿತ್ತು ಮಾರೇಶ್ವರಾ "

ಮಹಾಶರಣ ಮನಸಂಧಿ ಮಾರಿತಂದೆ ಕಾಯಕ ನಿಷ್ಠೆ ತಿಳಿಸುವಲ್ಲಿ ಹೇಗೆ ಹೇಳಿರುವರು ಕಾಯಕ ಮಾಡುವೆ ಎಂಬ ಶಿವಭಕ್ತನಾದವನಿಗೆ ಕಾಯಕವೇ ಕೈಲಾಸ ವಾಗುವುದು ಕಾಯಕವಿಲ್ಲದವನ ಮನವು ಗಾಳಿಯ ಹಾಗೆ ಆಗುವುದು ಮನಸು ಸಣ್ಣತನ ತೋರಿಸಿದಂತೆ ಆಗುವುದು ಎಂದು ತಿಳಿದು ಬರುತ್ತದೆ. ಗಡಿಗೆಯ ಗಂಜಿಯ ಆಸೆ ಮಾಡಬಾರದು ಕೊಡುವೆ ನಂಬರ ಮನೆಗೆ ಗಳಿ ಗಳಿಗೆ ಹೋಗಬೇಡ ಸಮಾಜಮುಖಿಯಾದ ಇಂಥ ಹಲವು ವಿಚಾರಗಳನ್ನು ತಿಳಿಸುತ್ತಾ ಮನಸ್ಸು ಶುದ್ದವಾಗಬೇಕು ಎಂದು ಹೇಳುತ್ತಾರೆ. ಮನಸ್ಸು ಒಳ್ಳೆಯದರ ಕಡೆಗೆ ಸಂಚಾರ ಮಾಡಬೇಕು ಕಾಯಕ ಎಂಬುದು ದೇವರ ಸನ್ನಿಧಾನಕ್ಕೆ ಕರೆದುಕೊಂಡು ಹೋಗುತ್ತದೆ. ಕೆಲಸ ಮಾಡುವಾಗ ಮನಸ್ಸು ತಳಮಳದಿಂದ ಹಿಂಜರಿಯಬಾರದು ಬೇರೆಯವರ ಕಾಯಕದ ಬಗ್ಗೆ ಚಿಂತಿಸಬಾರದು ಅನ್ಯರ ದೈವಕ್ಕೆ ನಮ್ಮನ್ನು ಹೋಲಿಸಿಕೊಳ್ಳಬಾರದು ನಮ್ಮ ಕಾಯಕವೇ ಶ್ರೇಷ್ಠನೆಂದು ಜೀವನ ನಡೆಸಬೇಕು ಎಂದು ಶರಣರು ತಿಳಿಸುತ್ತಾರೆ.

" ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯ ಶುದ್ಧವಿಲ್ಲದದ್ದು ಕಾಯಕವಲ್ಲ
ಆಸೆಯೆಂಬುದು ಭವದ ಬೀಜ
ನಿರಾಆಸೆಯೆಂಬುದು ನಿತ್ಯ ಮುಕ್ತಿ
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವ"

ಸಾಮಾಜಿಕ ಸಮಾನತೆಯ ತಳದಿಯ ಮೇಲೆ ಸಮಾಜ ಕಟ್ಟಭವಿಸುವ ಕಾಲಮಾನದಲ್ಲಿ ಉಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳಜಿ ಹೀಗೆ ನುಡಿಯುತ್ತಾಳೆ . ಸತ್ಯದ

ಕಾಯಕ ವಿಲ್ಲದವರು ಭಕ್ತರಲ್ಲ ಸತ್ಯ ಶುದ್ಧವಿಲ್ಲದ್ದು ಕಾಯಕವಲ್ಲ ಭಾವ ಶುದ್ಧ, ಮನಸ್ಸು ಶುದ್ಧ, ಇಟ್ಟುಕೊಂಡು ಕಾಯಕ ಮಾಡಬೇಕು ಎಂದು ತಿಳಿಸುತ್ತಾರೆ. ಆಸೆ ಇಟ್ಟುಕೊಂಡು ಕಾಯಕ ಮಾಡಿದರೆ ಅದು ಬಹುದ ಬೀಜ ಜೀವನದಲ್ಲಿ ನಿರಾಶೆ ಹೊಂದುತ್ತದೆ. ನಾವು ನಿರಾಶೆ ಹೊಂದಿದರೆ ನಿತ್ಯವೂ ಮುಕ್ತಿ ಹೊಂದಿದಂತೆ ಆಗುತ್ತದೆ ಅದಕ್ಕಾಗಿ ಕಾಯಕ, ಕೃತ್ಯ, ಸತ್ಯ, ಶುದ್ಧ, ಆಸೆ,ನಿರಾಸೆ ಮುಕ್ತಿ ಇವು ಮನುಷ್ಯ ಜೀವನದಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದುಕೊಳ್ಳುತ್ತವೆ ಅದಕ್ಕಾಗಿ ಮನುಷ್ಯ ಯಾವುದೇ ಒಂದು ವಿಷಯಕ್ಕೆ ಸಿಲುಕಿಕೊಳ್ಳದೆ ಕಾಯಕ ನಿಷ್ಠೆಯಿಂದ ಜೀವನ ನಡೆಸಬೇಕು ಎಂದು ತಿಳಿಸುತ್ತಾರೆ.

**" ದೇವಸಹಿತ ಭಕ್ತ ಮನೆಗೆ ಬಂದಡೆ**
**ಕಾಯಕವಾವುದೆಂದು ಬೆಸಗೊಂಡೆನಾದಡೆ**
**ನಿಮ್ಮಾಣೆ! ನಿಮ್ಮ ಪುರಾತರಾಣೆ**
**ತಲೆದಂಡ ತಲೆದಂಡ**
**ಕೂಡಲಸಂಗಮದೇವಾ "**

ದೇವರ ಸಮೇತನಾಗಿ ಒಬ್ಬ ಭಕ್ತ ಮನೆಗೆ ಬಂದರೆ ನಿಮ್ಮ ಕಾಯಕ ಯಾವುದು ಎಂದು ಕೇಳಲಾರೆ ಅದಕ್ಕೆ ಸಾಕ್ಷಿ ನಿಮ್ಮಾಣೆಯಾಗಿ ನಿಮ್ಮ ಪುರಾತನರ ಹಣೆಯಾಗಿ ಒಂದು ವೇಳೆ ಕೇಳಿದರೆ ನನ್ನ ತಲೆ ದಂಡವಾಗಿರುತ್ತೇನೆ ಎಂದು ಬಸವಣ್ಣನವರು ಹೇಳುತ್ತಾರೆ ಈ ವಚನದಲ್ಲಿ ಭಕ್ತ ಮತ್ತು ದೇವರು ಇಬ್ಬರೂ ಶ್ರೇಷ್ಠರು ಯಾರೂ ಕನಿಷ್ಟರಲ್ಲ ಇದರಲ್ಲಿ ಎರಡನೇ ಸಲ ಆಗುವದಿಲ್ಲ. ಭಕ್ತನಾದವನಿಗೆ ನಿನ್ನ ಕೆಲಸ ಯಾವುದು ಎಂದು ಕೇಳಲು ಹಾಗಿಲ್ಲ ಅವನ ಭಾವ ಭಕ್ತಿಗೆ ಅವನ ಕಾಯಕವ ನಿಷ್ಠೆ ಹೊಂದಿರುತ್ತದೆ. ಕಾಯಕದಲ್ಲಿ ಸಮಾನತೆ ತೋರುವುದು ಮಾತ್ರ ಮನುಷ್ಯ ಜೀವನದ ನೆಲೆಯಾಗಿದೆ. ಮಾಡುವ ಕಾಯಕ ಎಂಥದ್ದೇ ಇರಲಿ ಅದು ಭಕ್ತ ಸದ್ದಿಯಿಂದ ಮಾಡಿದರೆ ಅದುವೇ ಶ್ರೇಷ್ಠ ಅದರಲ್ಲಿ ಮೇಲು ಕೀಳು ಎಂಬುವುದಿಲ್ಲ ಒಂದು ಬಸವಣ್ಣನವರು ಹೇಳುತ್ತಾರೆ. ಅಂದಿನ ಮೇಲ್ವರ್ಗದವರು ಕೆಳವರ್ಗದವರಿಗೆ ಕಾಯಕ ನಿಂದನೆ ಮಾಡುವಲ್ಲಿ ಇಂಥ ದೃಷ್ಟಾಂತಗಳನ್ನು ನೀಡುತ್ತಾರೆ. ಕಾಯಕದಲ್ಲಿ ದೇವರನ್ನು ಕಾಣಲು ಸಾಧ್ಯ ಅದಕ್ಕಾಗಿ ಕಾಯಕವೇ ಶ್ರೇಷ್ಠ ಎಂದು ತಿಳಿಸುತ್ತಾರೆ.

**" ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ**
**ಚಿತ್ತ ವಿಚ್ಛಂದವಾಗದಿರಬೇಕು**
**ನೇಮದ ಕೂಲಿಯಿಂದಿನ ನಿತ್ಯ ನೇಮದಲ್ಲಿ**
**ಸಂದಿರಬೇಕು**

**ನೇಮದ ಕೂಲಿಯ ಬಿಟ್ಟು**
**ಹೇಮದಾಸೆಗೆ ಕಾಮಿಸಿ ದ್ರವ್ಯದ ಹಿಡಿದಡೆ**
**ತಾ ಮಾಡುವ ಸೇವೆ ನಷ್ಟವಯ್ಯ**
**ನಮ್ಮ ಜಂಗಮದ ಪ್ರಸಾದದಾಗೇ**
**ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯ "**

ನೂಲಿಯ ಚಂದಯ್ಯ ಶರಣರು ತಮ್ಮ ವಚನದಲ್ಲಿ ಕಾಯಕವನ್ನು ಅರಿತು ಹೇಳುವಲ್ಲಿ ಈ ಮಾತುಗಳು ಮನುಷ್ಯ ಜೀವನದ ಸತ್ಯವನ್ನು ತಿಳಿಸುತ್ತವೆ. ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ಚಂದವಾಗಿಸಿಕೊಳ್ಳಬೇಕು, ನಿತ್ಯ ನಿಯಮ, ದುಡಿಮೆಯಿಂದ ಜೀವನ ಕೂಡಿರಬೇಕು. ನಮ್ಮ ಕಾಯಕಕ್ಕೆ ತಕ್ಕ ಹಾಗೆ ಕೂಲಿಯನ್ನು ಬಿಟ್ಟು ಬಂಗಾರದ ಆಸೆಗೆ ಬೆನ್ನು ಹತ್ತಿ ನಮ್ಮ ಕಾಯಕವನ್ನು ಮರೆಯಬಾರದು ಎಂದು ಹೇಳುತ್ತಾರೆ. ನಮ್ಮ ದುಡಿಮೆಗೆ ತಕ್ಕ ಪ್ರತಿಫಲವನ್ನು ಬಯಸ ಬೇಕೆ ಹೊರತು ಬೇರೆಯವರ ಸಂಪತ್ತನ್ನು ಬಯಸಬಾರದು ಎಂದು ಹೇಳುವಲ್ಲಿ 12ನೇ ಶತಮಾನದ ಬಸವಾದಿ ಶರಣರು ತಿಳಿಸಿದ ಜೀವನದ ಹಲವು ಗೊತ್ತು ಗುರಿಗಳನ್ನು ವಚನ ಸಾಹಿತ್ಯದಲ್ಲಿ ಇಂದು ನಾವು ತಿಳಿದುಕೊಳ್ಳಬಹುದಾಗಿದೆ. ಇನ್ನೊಂದು ಸಾಲಿನಲ್ಲಿ ನಮ್ಮ ದುಡಿಮೆಯ ಪ್ರಸಾದವೇ ಚಂದೇಶ್ವರ ಲಿಂಗಕ್ಕೆ ಪ್ರಾಣವಾಗುವುದು ಅದಕ್ಕಾಗಿ ನಮ್ಮ ದುಡಿಮೆಯಿಂದ ಬಂದ ಅನ್ನವನ್ನು ಪ್ರಸಾದ ರೂಪದಲ್ಲಿ ಹಂಚಬೇಕು ಸತ್ಯವಾಗುವುದು ಎಂದು ತಿಳಿಸುತ್ತಾರೆ. ಹೀಗೆ ಬಸವಾದಿ ಶರಣರಲ್ಲಿ ಕಾಯಕದ ಮಹತ್ವ ಕುರಿತು ತಮ್ಮ ಅನುಭವದ ಮೂಲಕ ತಿಳಿಸಿದ ಸಾಮಾನ್ಯ ಆಡು ಮಾತಿನ ಮೂಲಕ ಕಟ್ಟಿದ ಸಾಹಿತ್ಯ ವಚನ ಸಾಹಿತ್ಯವೇ ಇಂದು ಮನುಷ್ಯ ಜೀವನಕ್ಕೆ ದಾರಿ ದೀಪವಾಗಿ ನಿಂತಿವೆ ಸಮಾಜದಲ್ಲಿ ಕಾಯಕ ತಾರತಮ್ಯ, ಲಿಂಗ ತಾರತಮ್ಯ ಇವೆಲ್ಲವುಗಳನ್ನು ಹೋಗಲಾಡಿಸಲು ನಮ್ಮ ಜೀವನವನ್ನೇ ಲೆಕ್ಕಿಸದೆ ತಮ್ಮನ್ನು ತಾವು ಅರ್ಪಿಸಿಕೊಂಡು ಸಮಾಜ ಸೇವೆ ಮಾಡಿರುವುದು ಕಂಡುಬರುತ್ತದೆ

ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 11, Iss 6, 2022

## ಆಕಾರ ಗ್ರಂಥಗಳು

1) ವಚನವರ್ಷ ( ದಿನಕ್ಕೊಂದು ವಚನ ) ಸಂಪಾದಕರು ಡಾ. ಎಂ ಎಂ ಕಲಬುರ್ಗಿ
2) ಸಮಗ್ರ ವಚನ ಸಂಪುಟಗಳು ಸಂ.ಡಾ. ಎಂ ಎಂ ಕಲಬುರ್ಗಿ
3) ವಚನ ಚಳುವಳಿ ಡಾ. ಬಸವರಾಜ ಸಬರದ
4) ವಚನ ಸಾಹಿತ್ಯ ಡಾ. ಎಂ ಚಿದಾನಂದ ಮೂರ್ತಿ
5) ವಚನಪ್ರಜ್ಞೆ ಶ್ರೀ ಮಹಾಂತ ಸ್ವಾಮೀಜಿ ಮುದುಗಲ್ಲ
6) ಶಿವದಾಸ ಗೀತಾಂಜಲಿ ಸಂ. ಬಸವರಾಜ ಎಲ್.